# ಸಮಗ್ರ ಶಿಕ್ಷಣ – ಕರ್ನಾಟಕ

**ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು – 560 001**

---

ಸಂಖ್ಯೆ: 12342/DIRQ/4/JDP/2019-20

ದಿನಾಂಕ: 21.08.2023

## ಸುತ್ತೋಲೆ

ವಿಷಯ: ರಾಜ್ಯದ ಆಯ್ದ 262 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿ ಪ್ರಾರಂಭಿಸುವ ಕುರಿತು.

ಉಲ್ಲೇಖ: 2023-24 ನೇ ಸಾಲಿನ ವಾರ್ಷಿಕ ಯೋಜನಾ ಮಂಡಳಿ ಅನುಮೋದನೆಯ ನಡವಳಿ ದಿ:17.04.2023.

********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2023-24 ನೇ ಸಾಲಿನಿಂದ 262 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾಯೋಗಿಕವಾಗಿ ಷರತ್ತುಗಳಿಗೊಳಪಟ್ಟು ಪ್ರಾರಂಭಿಸಲು ಶಿಕ್ಷಣ ಮಂತ್ರಾಲಯದ ಪಿ.ಎ.ಬಿಯಲ್ಲಿ ಅನುಮತಿ ನೀಡಿರುತ್ತಾರೆ.

ಸದರಿ ಆದೇಶದಂತೆ ರಾಜ್ಯದ 262 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲು ಈ ಕೆಳಗಿನ ವಿವರವಾದ ಸೂಚನೆಗಳನ್ನು ನೀಡಲಾಗಿದೆ.

1. 2023-24ನೇ ಸಾಲಿನ ಪೂರ್ವ ಪ್ರಾಥಮಿಕ ತರಗತಿಗಳನ್ನು ಎಲ್ಲ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು ಆಗಸ್ಟ್ ತಿಂಗಳಿನಿಂದ ಪ್ರಾರಂಭಿಸುವುದು.
2. ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸುವ ಕುರಿತು ಸರ್ಕಾರಿ ಪ್ರಾಥಮಿಕ ಶಾಲೆಗಳ ಎಸ್.ಡಿ.ಎಂ.ಸಿಯವರು ಮತ್ತು ಶಿಕ್ಷಕರು ಸ್ಥಳೀಯ ಮಟ್ಟದಲ್ಲಿ ಪ್ರಚಾರವನ್ನು ಸರ್ಕಾರಿ ಪ್ರಾಥಮಿಕ ಶಾಲೆಗಳ ಎಸ್.ಡಿ.ಎಂ.ಸಿಯವರು ಮತ್ತು ಶಿಕ್ಷಕರು ಮಾಡುವುದು.
3. 2023-24ನೇ ಸಾಲಿನ ಪೂರ್ವ ಪ್ರಾಥಮಿಕ LKG ಯ ಒಂದು ವಿಭಾಗವನ್ನು ಮಾತ್ರ ಪ್ರಾರಂಭಿಸುವುದು, ಈ LKG ತರಗತಿಗೆ 4 ವರ್ಷದಿಂದ 5 ವರ್ಷದ ವಯೋಮಿತಿಯ ಒಳಗಿನ ಮಕ್ಕಳನ್ನು ದಾಖಲುಮಾಡಿಕೊಳ್ಳುವುದು. ಈ ವಿಭಾಗ ಪ್ರಾರಂಭಿಸಲು 4 ವರ್ಷದಿಂದ 5 ವರ್ಷದ ವಯೋಮಾನದ ಕನಿಷ್ಠ 20 ಮಕ್ಕಳು ಪ್ರವೇಶ ಪಡೆಯುವಂತಿರಬೇಕು ಹಾಗೂ ಗರಿಷ್ಠ 30 ಮಕ್ಕಳನ್ನು ಮಾತ್ರ ದಾಖಲಿಸುವುದು.
4. ಪೂರ್ವ ಪ್ರಾಥಮಿಕ ತರಗತಿಯನ್ನು ಪ್ರಾರಂಭಿಸಲು ಒಂದು ಕೊಠಡಿಯನ್ನು ಗುರುತಿಸಿಕೊಳ್ಳುವುದು ಹಾಗೂ ಕೊಠಡಿ ಸಜ್ಜುಗೊಳಿಸುವುದು ಅವಶ್ಯ ಸಾಧನ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸುವುದು. ಕೊಠಡಿ ಸಜ್ಜುಗೊಳಿಸಲು ಸ್ಥಳಿಯ ಚಿತ್ರಕಲಾ ಶಿಕ್ಷಕರನ್ನು / ಚಿತ್ರಕಲಾ ಪರಿಣಿತರನ್ನು ಬಳಸಿಕೊಂಡು ಮಕ್ಕಳೀಗೆ ಆಕರ್ಷಕವಾದ ಚಿತ್ರಗಳ ರಚನೆ, ಗೋಡೆ ಮೇಲೆ ನೆಲ ಮಟ್ಟದಿಂದ 2 ಅಡಿಯವರೆಗೆ ಮಕ್ಕಳು ಬರೆಯಲು/ ಚಿತ್ರ ರಚಿಸಲು ಸಾಧ್ಯವಾಗುವಂತೆ ಗ್ರೀನ್ ಬೋರ್ಡ್/ಕರಿಹಲಗೆ ರಚನೆ ಮುಂತಾದ ಕಾರ್ಯಗಳನ್ನು ಮಾಡುವುದು. ಖರೀದಿಸಬೇಕಾದ ಸಾಧನ ಸಾಮಗ್ರಿಗಳ ಪಟ್ಟಿಯನ್ನು ಹಾಗೂ ಕೆಲವು ಕೊಠಡಿಯ ವಿನ್ಯಾಸದ ಕೆಲವು ಮಾದರಿ ಉದಾಹರಣೆಗಳನ್ನು ಕೂಡಲೇ ಒದಗಿಸಲಾಗುವುದು.

5. ಪ್ರತಿ ಪೂರ್ವ ಪ್ರಾಥಮಿಕ ತರಗತಿಗೆ ಒಬ್ಬ ಶಿಕ್ಷಕಿ/ಶಿಕ್ಷಕ ಮತ್ತು ಒಬ್ಬರು ಆಯಾರವರನ್ನು ಶಾಲಾ ಎಸ್.ಡಿ.ಎಂ.ಸಿ ವತಿಯಿಂದ ತಾತ್ಕಾಲಿಕವಾಗಿ 10 ತಿಂಗಳುಗಳ ಅವಧಿಗೆ ಈ ಕೆಳಕಂಡ ಮಾನದಂಡದಂತೆ ನೇಮಕ ಮಾಡಿಕೊಳ್ಳುವುದು ಪೂರ್ವ ಪ್ರಾಥಮಿಕ ತರಗತಿ ಶಿಕ್ಷಕಿ/ಶಿಕ್ಷಕರಿಗೆ ಪ್ರಸ್ತುತ ಅತಿಥಿ ಶಿಕ್ಷಕರಿಗೆ ನೀಡುತ್ತಿರುವ ಸಂಭಾವನೆಯಂತೆಯೇ ಮಾಸಿಕ ರೂ. 7500.00 ಮತ್ತು ಆಯಾ ಇವರಿಗೆ ಮಾಸಿಕ ರೂ. 5000.00 ಸಂಭಾವನೆಯನ್ನು ನಿಗದಿಪಡಿಸಲಾಗಿದೆ. ವೇತನ ಅನುದಾನವನ್ನು ಆಯಾ ಎಸ್.ಡಿ.ಎಂ.ಸಿ. ಖಾತೆಗೆ ಸಮಗ್ರ ಶಿಕ್ಷಣ ಕರ್ನಾಟಕ ಕಛೇರಿಯಿಂದ ಬಿಡುಗಡೆ ಮಾಡಲಾಗುವುದು.

**ಶಿಕ್ಷಕಿ/ಶಿಕ್ಷಕರನ್ನು ಮತ್ತು ಆಯಾರವರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಈ ಕೆಳಗಿನ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ:**

i. ಶಿಕ್ಷಕರು: ಪೂರ್ವ ಪ್ರಾಥಮಿಕ ತರಗತಿ ಶಿಕ್ಷಕಿ/ಶಿಕ್ಷಕ ಪದವಿ ಪೂರ್ವ ಶಿಕ್ಷಣದಲ್ಲಿ (PUC) ಕನಿಷ್ಠ 50% ಅಂಕಗಳನ್ನು ಪಡೆದು ತೇರ್ಗಡೆಯಾಗಿರಬೇಕು ಮತ್ತು NCTE ಮಾನ್ಯತೆ ಪಡೆದ ಸಂಸ್ಥೆಯಿಂದ ಎರಡು ಅಥವಾ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಯ ಡಿಪ್ಲೋಮಾ ಇನ್ ನರ್ಸರಿ ಟೀಚರ್ಸ್ ಎಜ್ಯುಕೇಶನ್/ಪ್ರೀ-ಸ್ಕೂಲ್ ಎಜ್ಯುಕೇಶನ್/ಅರ್ಲಿ ಚೈಲ್ಡ್‌ಹುಡ್ ಎಜ್ಯುಕೇಶನ್ ಪ್ರೋಗ್ರಾಂ (ಡಿ.ಇ.ಸಿ.ಇಡಿ) ಅಥವಾ ಬಿ.ಇಡಿ (ನರ್ಸರಿ) ಅರ್ಹತೆ [Diploma in Nursery Teachers Education/ pre-School Education/Early Childhood Education Programme (D.E.C.ED) of duration of not less than two years or B.Ed(Nursery)] ಹೊಂದಿರಬೇಕು, ವಯಸ್ಸು 45 ವರ್ಷಕ್ಕಿಂತ ಕಡಿಮೆ ಇರಬೇಕು.

ಒಂದು ವೇಳೆ ಈ ಮೇಲಿನ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ ಪಡೆದ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಪಿ.ಯು.ಸಿ.ಯಲ್ಲಿ ಕನಿಷ್ಠ 50% ಅಂಕಗಳನ್ನು ಪಡೆಯುವುದರ ಜೊತೆಗೆ NCTE ಮಾನ್ಯತೆ ಪಡೆದ ಸಂಸ್ಥೆಯಿಂದ ಡಿ.ಎಡ್ ತರಬೇತಿ ಹೊಂದಿರುವ 45 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಭ್ಯರ್ಥಿಗಳನ್ನು ಪರಿಗಣಿಸುವುದು.

ii. ಆಯಾಗಳ ಹುದ್ದೆಗೆ ಕನಿಷ್ಠ ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು ಕಡ್ಡಾಯವಾಗಿ ಮಹಿಳೆಯಾಗಿರಬೇಕು, ವಯಸ್ಸು 45 ವರ್ಷಕ್ಕಿಂತ ಕಡಿಮೆ ಇರಬೇಕು ಮತ್ತು ಸ್ಥಳಿಯರಾಗಿರಬೇಕು (ಆಯಾ ಗ್ರಾಮ/ವಾರ್ಡ್ ವ್ಯಾಪ್ತಿಯವರು), ಒಂದು ವೇಳೆ ಸ್ಥಳಿಯವಾಗಿ ಯಾವುದೇ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಸರ್ಕಾರಿ ಶಾಲೆ ಇರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದವರನ್ನು/ಪಕ್ಕದ ವಾರ್ಡ್‌ನವರನ್ನು ಪರಿಗಣಿಸಬೇಕು)

6. **ಶಿಕ್ಷಕರ/ಆಯಾರ ಆಯ್ಕೆಯಲ್ಲಿ ಅನುಸರಿಸಬೇಕಾದ ಅಂಶಗಳು:**

a) ಶಿಕ್ಷಕರ/ಆಯಾರ ಆಯ್ಕೆ ಸಮಿತಿ:- ಕ್ಷೇತ್ರಶಿಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಇರುವ ಮುಖ್ಯ ಶಿಕ್ಷಕರು, ಪ್ರಾಥಮಿಕ ವಿಭಾಗದ ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ಒಬ್ಬ ಹಿರಿಯ ಸಹ ಶಿಕ್ಷಕ / ಶಿಕ್ಷಕಿ ಸದಸ್ಯರಾಗಿರುವುದು.

b) ಶಿಕ್ಷಕರ ಆಯ್ಕೆಗೆ ವಿವಿಧ ಅಂಶಗಳಿಗೆ ನೀಡಬೇಕಾದ ಮೌಲ್ಯ(weightage): ಅರ್ಹ ಅಭ್ಯರ್ಥಿಗಳ ಪೈಕಿ ಈ ಕೆಳಗಿನ ಅಂಶಗಳಂತೆ ಅತೀ ಹೆಚ್ಚು ಒಟ್ಟು ಅಂಕ ಗಳಿಸಿದವರವನ್ನು ಪರಿಗಣಿಸುವುದು.

| ಕ್ರ. ಸಂ | ವಿವರಗಳು | | | | |
|---|---|---|---|---|---|
| | ಭಾಗ–A ಶೈಕ್ಷಣಿಕ / ವೃತ್ತಿಪರಅರ್ಹತೆ | ಪಡೆದಒಟ್ಟು ಶೇಕಡಾ ಅಂಕಗಳು(ಸಂಚಿತ **Aggregate)** | ನೀಡಬೇಕಾದ ಅಂಕಗಳು | ಗರಿಷ್ಠ ಅಂಕಗಳು | |
| 1 | ಪದವಿ ಪೂರ್ವ | X% | 32%(=ಪಿ.ಯು.ಸಿಯಲ್ಲಿ X* 32/ 100) | 32 | |
| 2 | ಪೂರ್ವ ಪ್ರಾಥಮಿಕ ತರಬೇತಿ/ ಡಿ.ಎಡ್ ತರಬೇತಿ | Y% | 35%(=ಪೂ/ಪ್ರಾ ಡಿಇಡಿಯಲ್ಲಿ Y* 35/ 100) | 35 | |
| | | | | | |
| | ಭಾಗ–B ಸ್ಥಳೀಯ ಗ್ರಾಮದ ಅಭ್ಯರ್ಥಿ/ ಇತರ ಹತ್ತಿರದ ಗ್ರಾಮದ ಅಭ್ಯರ್ಥಿಗಳ **Weightage** ಅಂಕಗಳು | ಅಂಶ | ನೀಡಬೇಕಾದ ಅಂಕಗಳು | ಗರಿಷ್ಠ ಅಂಕಗಳು | |
| 1 | | ಸ್ಥಳೀಯ ಗ್ರಾಮದ/ವಾರ್ಡ ಅಭ್ಯರ್ಥಿಗಳು | 3 | 3 | |
| 2 | | ಇತರ ಹತ್ತಿರದ ಗ್ರಾಮದ/ ವಾರ್ಡ ಅಭ್ಯರ್ಥಿಗಳು | 1 | | |
| | | | | | |
| | ಭಾಗ–C ಪೂರ್ವ ಪ್ರಾಥಮಿಕ ತರಗತಿ ಬೋಧನಾ ಅನುಭವ | ಅನುಭವ ವರ್ಷಗಳಲ್ಲಿ | ನೀಡಬೇಕಾದ ಅಂಕಗಳು | ಗರಿಷ್ಠ ಅಂಕಗಳು | |
| 1 | | ಒಂದು ವರ್ಷದವರೆಗೆ | 5 | 20 | |
| 2 | | ಒಂದು ವರ್ಷದಿಂದ ಎರಡು ವರ್ಷದವರೆಗೆ | 10 | | |
| 3 | | ಎರಡು ವರ್ಷ ಮೇಲ್ಪಟ್ಟು | 20 | | |
| | | | | | |
| | ಭಾಗ–D ಪೂರ್ವ ಪ್ರಾಥಮಿಕ ತರಗತಿಗಳ ಬೋಧನಾ ಪ್ರಾವಿಣ್ಯತೆಗಳು/ಕೌಶಲಗಳು | ಅಂಶ | ಅಂಶವಾರು ಗರಿಷ್ಠ ಅಂಕಗಳು | ಗರಿಷ್ಠ ಅಂಕಗಳು | |
| | | ಮಕ್ಕಳೊಡನೆ ಸಂವಹನ/ಭಾಷಾ ಕೌಶಲಗಳು | 5 | 10 | |
| | | ಮಕ್ಕಳ ಪದ್ಯಗಳು/ಖ್ರಿಥಿಟಜಗಳನ್ನು ಪ್ರಾಸಬದ್ಧವಾಗಿ ಹಾಗೂ ಹಾವಭಾವದೊಡನೆ ಹಾಡುವ ಕೌಶಲ | 3 | | |
| | | ಮಕ್ಕಳಿಗೆ ಆಟ ಆಡಿಸುವ ಮತ್ತು ಮಕ್ಕಳೊಡನೆ ಆಟವಾಡುವ ಕೌಶಲ | 2 | | |
| | ಒಟ್ಟು ಅಂಕ | | | | 100 |

C) ಆಯಾ ಆಯ್ಕೆಗೆ ಸಂಭಂದಿಸಿದಂತೆ ಅರ್ಹ ಅಭ್ಯರ್ಥಿಗಳ ಪೈಕಿ:

| ಕ್ರ.ಸಂ | | | | |
|---|---|---|---|---|
| | ಭಾಗ–A ಶೈಕ್ಷಣಿಕ / ವೃತ್ತಿಪರಅರ್ಹತೆ | ಪಡೆದಒಟ್ಟು ಶೇಕಡಾ ಅಂಕಗಳು | ನೀಡಬೇಕಾದ ಅಂಕಗಳು | ಗರಿಷ್ಠ ಅಂಕಗಳು |
| 1 | ಎಸ್.ಎಸ್.ಎಲ್.ಸಿ | X% | 70%(= ಎಸ್.ಎಸ್.ಎಲ್.ಸಿಯಲ್ಲಿನ X* 70/ 100) | 70 |
| | ಭಾಗ–B ಕಾರ್ಯದ ಅನುಭವ | ಅನುಭವ ವರ್ಷಗಳಲ್ಲಿ | ನೀಡಬೇಕಾದ ಅಂಕಗಳು | ಗರಿಷ್ಠ ಅಂಕಗಳು |
| | | ಒಂದು ವರ್ಷದವರೆಗೆ | 5 | 20 |
| | | ಒಂದು ವರ್ಷದಿಂದ ಎರಡು ವರ್ಷದವರೆಗೆ | 10 | |
| | | ಎರಡು ವರ್ಷ ಮೇಲ್ಪಟ್ಟು | 20 | |
| | ಭಾಗ–C ಕೆಲಸದ ಬಗೆಗಿನ ಮನೋಭಾವ / ಕೌಶಲಗಳು | ಅಂಶ | ಅಂಶವಾರು ಗರಿಷ್ಠ ಅಂಕಗಳು | ಗರಿಷ್ಠ ಅಂಕಗಳು |
| | | ಮಕ್ಕಳೊಡನೆ ಸಂವಹನ ಸಾಮರ್ಥ್ಯ | 5 | **10** |
| | | ಮಕ್ಕಳ ಶುಚಿತ್ವ ಆರೋಗ್ಯದ ಬಗೆಗಿನ ಅರಿವು ಮತ್ತು ಮನೋಭಾವಗಳು | 5 | |
| | ಒಟ್ಟು | | | 100 |

d) ಈ ಮೇಲಿನ ಮಾನದಂಡಗಳಂತೆ ಆಯ್ಕೆ ಮಾಡಿದ ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅನುಮೋದನೆಗೆ ಸಲ್ಲಿಸುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ಕೂಡಲೇ ಅನುಮೋದನೆ ನೀಡುವುದು/ ನ್ಯೂನ್ಯತೆಗಳಿದ್ದರೆ ಸಕಾರಣದೊಂದಿಗೆ ಪರಿಷ್ಕರಣೆಗೆ ಸಲಹೆ ನೀಡುವುದು ಮತ್ತು ನಿಗಧಿತ ಕಾಲಮಿತಿಯೊಳಗೆ ಪ್ರಕ್ರಿಯೆ ಪೂರ್ಣಗೊಳ್ಳುವಂತೆ ಕ್ರಮವಹಿಸುವುದು.

7. ಶಿಕ್ಷಕ ಮತ್ತು ಆಯಾಗಳ ನೇಮಕಾತಿ ಕುರಿತು ವ್ಯಾಪಕ ಪ್ರಚಾರ ಮಾಡುವುದು.
8. ಶಿಕ್ಷಕರು ಮತ್ತು ಆಯಾರವರ ನೇಮಕಾತಿಯನ್ನು ದಿ:30.08.2023ರೊಳಗೆ ಮಾಡಿಕೊಂಡು ಪಟ್ಟಿಯನ್ನು ಈ ಕಛೇರಿಗೆ ಮತ್ತು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸಲ್ಲಿಸುವುದು.
9. ಆಯ್ಕೆಯಾದ ಶಿಕ್ಷಕರು/ ಮಾರ್ಚ್ 31ರವರೆಗೆ ಆಯಾರವರು ಮಾತ್ರ ನೇಮಕವಾಗಿರುವುದು ಸದರಿಯವರು ಮುಂದಿನ ವರ್ಷಗಳಲ್ಲಿ ನೇಮಕಾತಿಗಾಗಿ ಪುನಃ ಅರ್ಜಿ ಸಲ್ಲಿಸಬೇಕಾಗುತ್ತದೆ.
10. ಪೂರ್ವ ಪ್ರಾಥಮಿಕ ತರಗತಿಗಳನ್ನು ಪೂರ್ವಾಹ್ನ 10.00ರಿಂದ ಅಪರಾಹ್ನ 3.30ರ ವರೆಗೆ ನಡೆಸುವುದು.
11. ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಬಳಸಬೇಕಾದ ಪಠ್ಯಕ್ರಮ, ಬೋಧನೋಪಕರಣಗಳು ಮುಂತಾದವುಗಳನ್ನು ಕೂಡಲೇ ಶಾಲೆಗಳಿಗೆ ಒದಗಿಸಲಾಗುವುದು.
12. ಆಯ್ಕೆಯಾದ ಶಿಕ್ಷಕರಿಗೆ ಡಯಟ್‌ಗಳ ತರಬೇತಿಯನ್ನು ನೀಡಲಾಗುವುದು.
13. ಪ್ರತಿ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳ ಅನುಷ್ಠಾನದ ಸಮನ್ವಯಕ್ಕಾಗಿ (Coordiation) ಒಬ್ಬ ಸಹ ಶಿಕ್ಷಕರನ್ನು / ಉಪನ್ಯಾಸಕರನ್ನು ನೇಮಿಸುವುದು, ಇವರ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ರಾಜ್ಯ ಕಛೇರಿಗೆ ಒದಗಿಸುವುದು.
14. ಪೂರ್ವ ಪ್ರಾಥಮಿಕ ವಿಭಾಗದ ಮಕ್ಕಳಿಗೆ ಅಂಗನವಾಡಿಗಳಲ್ಲಿ ನೀಡುವ ಆಹಾರಘಟಕ ವೆಚ್ಚದಂತೆ ಹಾಲು, ಉಪಾಹಾರ ಮತ್ತು ಊಟ ನೀಡುವುದು. ಈ ಕುರಿತು ಆಯಾ ಜಿಲ್ಲೆಯ ಶಿಕ್ಷಣಾಧಿಕಾರಿಗಳು,

ಅಕ್ಷರದಾಸೋಹ, ಇವರು ಪ್ರಸ್ತಾವನೆಯನ್ನು ಸಹನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು ಇವರಿಗೆ ಸಲ್ಲಿಸಿ ಅವಶ್ಯ ಕ್ರಮವಹಿಸುವುದು.

15. ಉಪನಿರ್ದೇಶಕರು(ಆಡಳಿತ) ಇವರು ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಕೊಠಡಿ/ಮೂಲಭೂತ ಸೌಲಭ್ಯ ಒದಗಿಸುವುದು, ಶಿಕ್ಷಕರ/ಆಯಾರ ಆಯ್ಕೆ ಮಕ್ಕಳ ದಾಖಲಾತಿ, ಉಪಾಹಾರ ಪೂರೈಕೆ, ತರಗತಿಗಳ ನಿರ್ವಹಣೆ ಮುಂತಾದ ಎಲ್ಲಾ ಅಂಶಗಳ ಬಗ್ಗೆ ಸಂಪೂರ್ಣ ಉಸ್ತುವಾರಿ ವಹಿಸುವುದು.
16. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇವರು ಈ ಕುರಿತು ಅವಶ್ಯ ನಿರ್ದೇಶನಗಳನ್ನು ಸರ್ಕಾರಿ ಶಾಲೆಗಳಲ್ಲಿನ ಮುಖ್ಯ ಶಿಕ್ಷಕರಿಗೆ ನೀಡುವುದು.
17. ಉಪನಿರ್ದೇಶಕರು(ಅಭಿವೃದ್ಧಿ) ಇವರು ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆ, ಶಿಕ್ಷಕರ ತರಬೇತಿ, ಮಕ್ಕಳ ಪ್ರಗತಿ ಮುಂತಾದವುಗಳ ನಿರ್ವಹಣೆ ಮಾಡುವುದು. ಕೆಪಿಎಸ್ ನೋಡಲ್ ಅಧಿಕಾರಿಗಳ ಮೂಲಕ ಇವುಗಳ ಮೇಲ್ವಿಚಾರಣೆ ಹಾಗೂ ಶಾಲೆ ಹಂತದಲ್ಲೇ ಸ್ಥಳ ಮಟ್ಟದ ಬೆಂಬಲ ಒದಗಿಸುವುದು. ಬ್ಲಾಕ್ ಹಂತದಲ್ಲಿ ಬಿ.ಆರ್.ಸಿ ಸಮನ್ವಯಾಧಿಕಾರಿಗಳು, ಒಬ್ಬ ಸಂಪನ್ಮೂಲ ವ್ಯಕ್ತಿಯನ್ನು ಈ ಕಾರ್ಯಕ್ಕಾಗಿ ಗುರುತಿಸಿ ಮಾರ್ಗದರ್ಶನ ನೀಡುವುದು.
18. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲಿನ ಎಲ್ಲ ಅಂಶಗಳ ಉಸ್ತುವಾರಿಯನ್ನು ಅವರ ವ್ಯಾಪ್ತಿಯ ಸರ್ಕಾರಿ ಶಾಲೆಗಳಲ್ಲಿ ನಿರ್ವಹಿಸುವುದು.
19. ರಾಜ್ಯ ಕಛೇರಿಯಲ್ಲಿ ಈ ಕುರಿತು ಸಂಪರ್ಕಿಸಬೇಕಾದ ಇ-ಮೇಲ್ ವಿಳಾಸ-sskecce@gmail.com.
20. ಸಂಪರ್ಕಿಸಬೇಕಾದ ಅಧಿಕಾರಿಗಳು:-ಕಿರಿಯ ಕಾರ್ಯಕ್ರಮಾಧಿಕಾರಿಗಳು(9448999317), ಹಿರಿಯ ಕಾರ್ಯಕ್ರಮಾಧಿಕಾರಿಗಳು(9480695477) ಹಾಗೂ ಸಹ ನಿರ್ದೇಶಕರು(9448856470).

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ.

**ಇವರಿಗೆ: ಅಗತ್ಯಕ್ರಮಕ್ಕಾಗಿ**

1. ರಾಜ್ಯದ ಎಲ್ಲ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲ ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇ ಸಂಸ್ಥೆ / ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ.
3. ರಾಜ್ಯದ ಎಲ್ಲ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ.
4. ರಾಜ್ಯದ ಎಲ್ಲ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ.
5. ರಾಜ್ಯದ ಎಲ್ಲ ಶಿಕ್ಷಣಾಧಿಕಾರಿಗಳು, ಅಕ್ಷರದಾಸೋಹ.
6. ರಾಜ್ಯದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು.
7. ಸಂಬಂಧಿಸಿದ ಸರ್ಕಾರಿ ಶಾಲೆಗಳ ಮುಖ್ಯಸ್ಥರು.

**ಪ್ರತಿ ಮಾಹಿತಿಗಾಗಿ**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
4. ರಾಜ್ಯದ ಎಲ್ಲ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ.
6. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು.
7. ನಿರ್ದೇಶಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
8. ನಿರ್ದೇಶಕರು, ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಸಂಸ್ಥೆ(ಸಿಸ್ಲೆಪ್).
9. ಸಹ ನಿರ್ದೇಶಕರು, ಮಧ್ಯಾಹ್ನ ಉಪಾಹಾರ ಯೋಜನೆ.